

# ಪ್ಲಾಟಿನಂ ಪ್ರೀತಿ

ವಿದೇಶಗಳಲ್ಲಿ ಜನಪ್ರಿಯವಾಗಿದ್ದ ಪ್ಲಾಟಿನಂ ಈಗೀಗ ನಮ್ಮಲ್ಲೂ ಯುವತಿಯರನ್ನು ಬಹುವಾಗಿ ಸೆಳೆಯುತ್ತಿದೆ. ಆಕರ್ಷಕ ಮತ್ತು ಎಲಿಗೆಂಟ್ ಲುಕ್ ನೀಡುವ ಕಾರಣದಿಂದ ಪ್ಲಾಟಿನಂ ಆಭರಣವನ್ನು ಫ್ಯಾಷನ್‌ಪ್ರಿಯ ಮಹಿಳೆಯರು ಧರಿಸಲಾರಂಭಿಸಿದ್ದಾರೆ. ಹಗುರವೂ, ಆರಾಮದಾಯಕವೂ ಆಗಿರುವ ಪ್ಲಾಟಿನಂ ಆಭರಣ ಹಲವು ವಿನ್ಯಾಸಗಳಲ್ಲಿ ಸೆಳೆಯುತ್ತಿದೆ. ಹೀಗಾಗಿ ವಜ್ರ, ಚಿನ್ನ, ಬೆಳ್ಳಿ ಆಭರಣಗಳಿಗಿಂತಲೂ ಪ್ಲಾಟಿನಂ ಇಂದು ಜನಪ್ರಿಯತೆಯ ಹಾದಿ ಹಿಡಿದಿದೆ. ಒಂದೇ ಒಂದು ಒಡವೆಯಲ್ಲಿ ಎದ್ದು ಕಾಣುವಂತಹ ಗುಣ ಪ್ಲಾಟಿನಂ ಒಡವೆಗಳಿಗೆ ಇರುವುದರಿಂದ ಹೆಚ್ಚಿನ ಬೇಡಿಕೆಯನ್ನೂ ಗಳಿಸುತ್ತಿದೆ.

ಉಂಗುರ, ಸ್ಟಡ್, ನೆಕ್ಲೇಸ್ ಅಥವಾ ನೆಕ್‌ಪೀಸ್, ಕಿವಿಯೋಲೆ, ಪೆಂಡೆಂಟ್ ಮುಂತಾದ ವೈವಿಧ್ಯದ ಜೊತೆಗೆ ಬ್ರೈಡಲ್ ಒಡವೆಗಳು ಕೂಡ ಯುವತಿಯರನ್ನು ಆಕರ್ಷಿಸುತ್ತಿವೆ. ಮದುವೆ ನಿಗದಿಯಾದ ಜೋಡಿ ಎಂಗೇಜ್‌ಮೆಂಟ್ ದಿನಕ್ಕಾಗಿ ಪ್ಲಾಟಿನಂ ಉಂಗುರವನ್ನೇ ಖರೀದಿಸಲು ಬಯಸುತ್ತಿರುವುದು ಈ ಆಭರಣ ಮುಂಚೂಣಿಗೆ ಬಂದಿರುವುದಕ್ಕೆ ಸಾಕ್ಷಿ.

ಮದುವೆ ನಿಶ್ಚಯವಾದ ಜೋಡಿಗಳು ಡೈಮಂಡ್, ಚಿನ್ನದ ಉಂಗುರ, ಬ್ರೇಸ್‌ಲೆಟ್, ಸರ, ನೆಕ್ಲೇಸ್‌ಗಳನ್ನು ಬಿಟ್ಟು ಹಗುರವಾದ ಪ್ಲಾಟಿನಂ ಒಡವೆಯತ್ತ ಮೋಹಿತರಾಗುತ್ತಿದ್ದಾರೆ. ವಿದೇಶಗಳಲ್ಲಿ ಮದುವೆ ನಿಗದಿಯಾದ ಜೋಡಿ ಪ್ಲಾಟಿನಂ ಆಭರಣವನ್ನೇ ಖರೀದಿಸಿ ಧರಿಸುವುದನ್ನು ಗಮನಿಸಿದ ಇಲ್ಲಿನ ವಿನ್ಯಾಸಗಾರರ ಚಿತ್ತ ಪ್ಲಾಟಿನಂ ಒಡವೆ ವಿನ್ಯಾಸದತ್ತ ಹರಿದದ್ದೇ ತಡ, ಇಲ್ಲೂ ನವನವೀನ ಪ್ಲಾಟಿನಂ ಆಭರಣ ಮಳಿಗೆಗಳಿಗೆ ಲಗ್ಗೆ ಇಟ್ಟಿವೆ. ಈ ಒಡವೆ ಸಂಗ್ರಹವನ್ನು ಅಂತರರಾಷ್ಟ್ರೀಯ ಮಟ್ಟದ ಒಡವೆ ವಿನ್ಯಾಸಗಳಿಂದ ಸ್ಫೂರ್ತಿ ಪಡೆದು ವಿನ್ಯಾಸಗೊಳಿಸಲಾಗಿದ್ದು, ಜಗತ್ತಿನ ಎಲ್ಲ ವಧು–ವರರಿಗೂ ಇಷ್ಟವಾಗುವ ಶೈಲಿಯಲ್ಲಿ ತಯಾರಿಸಲಾಗುತ್ತಿದೆ. ಪ್ಲಾಟಿನಂ ಒಡವೆಗಳಲ್ಲಿ ಹಲವು ಆಕರ್ಷಕ ಹಾಗೂ ಸೂಕ್ಷ್ಮ ಕುಸುರಿಗಳನ್ನು ಕೆತ್ತಲಾಗಿದೆ. ಇದು ತಕ್ಷಣ ಸೆಳೆಯುವಂತಿದೆ.

ಪ್ಲಾಟಿನಂ ಎವಾರ ಸಂಗ್ರಹದಲ್ಲಿ ವೈವಿಧ್ಯಮಯ ವಿನ್ಯಾಸದ ಒಡವೆಗಳಿವೆ. ಧರಿಸಿದರೆ ಎದ್ದುಕಾಣುವಂಥ ಸೊಬಗಿದೆ. ಮಹಿಳೆಯರಲ್ಲಿ 'ಆಧುನಿಕ ಸ್ತ್ರೀತ್ವ' ಮತ್ತು ಪುರುಷರಲ್ಲಿ 'ಧೈರ್ಯಶಾಲಿ ಗುಣ'ಗಳನ್ನು ಈ ಒಡವೆ ಬಿಂಬಿಸುತ್ತದೆ ಎಂಬುದು ಫ್ಯಾಷನ್ ವರ್ತಕರ ಅಂಬೋಣ.

ಪ್ಲಾಟಿನಂ ಒಡವೆಯಲ್ಲಿನ ಅನನ್ಯ ಮತ್ತು ಸಮಕಾಲೀನ ವಿನ್ಯಾಸಗಳು ಈಗ ಪುರುಷರನ್ನೂ ಸೆಳೆಯುತ್ತಿವೆ. ಜೊತೆಗೆ ತಮ್ಮ ಬಾಳ ಸಂಗಾತಿಗಾಗಿ ಒಡವೆ ಆಯ್ಕೆ ಮಾಡುವಂತೆ ಪ್ರೇರೇಪಿಸುವಂತಿವೆ. ಆಧುನಿಕ ಮನೋಭಾವದ ವಧೂವರರು ಭಾವನಾತ್ಮಕತೆಗೆ ಹೆಚ್ಚು ಆದ್ಯತೆ ನೀಡುತ್ತಾರೆ. ಅಲ್ಲದೆ ಪ್ಲಾಟಿನಂ ಆಭರಣ 'ಪ್ರೀತಿಯ ಸಂಕೇತ' (symbol of love) ಎಂಬ ಪರಿಕಲ್ಪನೆಯನ್ನೂ ಬಿಂಬಿಸುವ ಕಾರಣ ವಿವಾಹ ಆಕಾಂಕ್ಷಿಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ.

■ ಯು.ಎ.

### ಪ್ಲಾಟಿನಂ ಒಡವೆ ಟಿಪ್ಸ್

- ಪ್ಲಾಟಿನಂ ಒಡವೆ ಖರೀದಿಸುವಾಗ ಒಡವೆಯ ಪರಿಶುದ್ಧತೆಯನ್ನು ಗಮನಿಸಬೇಕು.
- ಬೇರೆ ಆಭರಣಗಳಿಂದ ಪ್ಲಾಟಿನಂ ಆಭರಣಗಳನ್ನು ಆದಷ್ಟು ದೂರವಿಡಬೇಕು.
- ಇತರ ಒಡವೆಗಳನ್ನು ಸ್ವಚ್ಛಗೊಳಿಸುವ ರೀತಿಯಲ್ಲೇ ಪ್ಲಾಟಿನಂ ಆಭರಣಗಳನ್ನು ಸ್ವಚ್ಛಗೊಳಿಸಿ.
- ಮನೆಗೆಲಸ ಮಾಡುವ ಸಮಯದಲ್ಲಿ ಪ್ಲಾಟಿನಂ ಆಭರಣಗಳನ್ನು ಧರಿಸಬೇಡಿ.
- ಪ್ಲಾಟಿನಂ ಆಭರಣಗಳು ತುಂಬಾ ದುಬಾರಿ. ಹೀಗಾಗಿ ಆದಷ್ಟು ಜೋಪಾನವಾಗಿ ತೆಗೆದಿಡಿ.


ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಗುರೂಜಿ ಮಹೇಶ್‌ಭಟ್"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.
ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಗುರೂಜಿ ಮಹೇಶ್‌ಭಟ್
9686999517